


### ಹೋಗಿ ಬರುವೆಯಾ ಮಾರುತಿ?

ಗುಡ್ ಬೈ 800 ಮಾರುತಿ ಕಾರಿನ ಇತಿಹಾಸ, ಉಪಯೋಗ, ವಿದಾಯವನ್ನು ಬಿ.ಎಂ. ಹನೀಫ್ ಅವರು ಸೋದಾಹರಣವಾಗಿ ವಿವರಿಸಿದ್ದಾರೆ.

-ಗಿರಿಜಾ ತಿಮ್ಮಯ್ಯ, ಮೈಸೂರು

### ಮಾರುತಿ ಇರಬೇಕಿತ್ತು

ಮಧ್ಯಮ ವರ್ಗದ ಜನರಿಗೆ ಕಾರು ಕೊಳ್ಳುವ ಯೋಗ ಕಲ್ಪಿಸಿದ ಮಾರುತಿ ಸಂಸ್ಥೆ ಹಿಮಾಲಯದ ಎತ್ತರಕ್ಕೆ ಬೆಳೆಯಿತು. ಹೀಗೆ ಏರುಮುಖದಲ್ಲಿರುವಾಗಲೇ ದಿಢೀರ್ ಎಂದು ಕಾರು ತಯಾರಿಸುವುದನ್ನು ನಿಲ್ಲಿಸಿಬಿಡುವುದು ಜನ ಸಾಮಾನ್ಯರಿಗೆ ಮಾಡುತ್ತಿರುವ ಘೋರ ಅನ್ಯಾಯ.

-ರಮಾನಂದ ಶರ್ಮಾ, ಬೆಂಗಳೂರು

### ಮೇರು ಪರ್ವತಗಳು

ಇಬ್ಬರೂ ಮೇರು ಪರ್ವತಗಳ ಪರಿಚಯ ಹೊತ್ತ 'ಸುಧಾ' ಭಾರವಾಗಿತ್ತು. ಒಬ್ಬರು ಅನ್ನ ನೀಡುವ ದಾಸೋಹಿ ಸಿದ್ಧಗಂಗಾ ಶರಣರು. ಮತ್ತೊಬ್ಬರು ಅನ್ನ ಬೆಳೆಯುವ ಕೃಷಿ ಪಂಡಿತ ಚೇರ್ಕಾಡಿ. ಬಹಳ ಅಮೂಲ್ಯವಾದ ಸಂಚಿಕೆ.

-ಯಶೋದ ಪ್ರಹ್ಲಾದ್, ತಿಪಟೂರು

### ರೋಮಾಂಚನ!

'ಕೇಶವಂತಿಕೆ' (ವಿಶಾಖ ಎನ್.) ದೀರ್ಘ ಕೇಶವುಳ್ಳ ಪುರುಷರನ್ನು 'ಕೇಶಿರಾಜ'ರೆಂದು ಕರೆಯಬಹುದೆ? ಏನೇ ಇರಲಿ. ಪ್ರಮದೆಯರ ಕೇಶರಾಜಿ(ಶಿ)ಯಂತೂ ಪುರುಷರನ್ನು ರೋಮಾಂಚಗೊಳಿಸುವುದು ನಿಶ್ಚಿತ!

-ಸಿಪಿಕೆ, ಮೈಸೂರು

### ಸಂಗ್ರಹ ಯೋಗ್ಯ

103ರ ಹೊಸ್ತಿಲಲ್ಲಿರುವ ಶರಣ ದಾಸೋಹಿ ಸಿದ್ಧಗಂಗಾ ಶಿವಕುಮಾರ ಸ್ವಾಮೀಜಿಯವರ ಸನ್ನಿಧಿಯಲ್ಲಿ ಚಿತ್ರ-ಬರಹ (ಎಸ್.ಚೆನ್ನದೇವರು, ಡಿ.ಬಿ.ನಾಗರಾಜ) ಶರಣರ ದಿನಚರಿ ಅಮೂಲ್ಯವಾದುದು. ಸಂಗ್ರಹ ಯೋಗ್ಯ ಚಿತ್ರ-ಲೇಖನ ಪ್ರಕಟಿಸಿದ್ದಕ್ಕೆ ಸುಧಾಗೆ ಅಭಿನಂದನೆಗಳು.

ಪುಷ್ಪಾ ಹಾಲಭಾವಿ, ಧಾರವಾಡ/ ರುದ್ರೇಶ ಅದರಂಗಿ, ಕೋಲಾರ/ ಪಿ.ಅಂಜನಪ್ಪ, ದಾವಣಗೆರೆ/ ಉಮಾ, ಇಳಕಲ್/ ಟಿ.ಎನ್.ಸರಸ್ವತಿ, ತಿಪಟೂರು

### ಶರಣ ದಾಸೋಹಿಯ ವಿಶಿಷ್ಟ

ಶರಣ ದಾಸೋಹಿ ಸಿದ್ಧಗಂಗಾ ಶಿವಕುಮಾರ ಸ್ವಾಮೀಜಿಯವರ ಕುರಿತ ಚಿತ್ರ ಬರಹ ಆಕರ್ಷಕ, ಮತ್ತು ವಿಶೇಷವಾಗಿತ್ತು.

ಎಂ.ಎಲ್.ಲಕ್ಷ್ಮಣರಾವ್, ದಾವಣಗೆರೆ/ ಸು.ವಿಜಯಲಕ್ಷ್ಮಿ, ಶಿವಮೊಗ್ಗ/ ಎಚ್.ಆನಂದಕುಮಾರ್, ಚಿತ್ರದುರ್ಗ/ ಮಹಾವೀರ ಕಾಸರ, ಚನ್ನಗಿರಿ

### ಪ್ರಶಸ್ತಿಗಳಿಗಿಲ್ಲದ ಭಾಗ್ಯ!

ನಾನು ತುಮಕೂರಿನಲ್ಲಿ 1977ರಿಂದ 81ರ ತನಕ ಇದ್ದೆ. ಆಗಾಗ ಬೆಳಗಿನ ಜಾವ 3ಕ್ಕೆ ಗೆಳೆಯರೊಂದಿಗೆ ಶಿವಕುಮಾರ ಸ್ವಾಮಿಗಳ ದರ್ಶನಕ್ಕೆ ಹೋದಾಗ ಮಾತನಾಡುವ ಅವಕಾಶ ಸಿಗುತ್ತಿತ್ತು. ಅವರಲ್ಲಿ ಯಾವುದೇ ಉಪದೇಶವಿರುತ್ತಿರಲಿಲ್ಲ. ಪತ್ರಿಕೆಗಳು, ಜನಜೀವನ ಚರ್ಚೆಯ ವಿಷಯ. ನಾಡಿನ ಲಕ್ಷಾಂತರ ಬಡವರಿಗೆ ಊಟ ಹಾಕಿ ಕಲಿಯುವ ಅವಕಾಶ ಕಲ್ಪಿಸಿಕೊಟ್ಟಿದ್ದಾರೆ. ಇಂತಹ ಮಹಾನ್ ವ್ಯಕ್ತಿಗೆ ಭಾರತರತ್ನ ಅಥವಾ ಮ್ಯಾಗ್ಸೆಸೆಯಂತಹ ಪ್ರಶಸ್ತಿ ನೀಡಿದ್ದರೆ ಆ ಪ್ರಶಸ್ತಿಗೇ ಘನತೆ ಬರುತ್ತಿತ್ತು. ಆ ಭಾಗ್ಯ ಪ್ರಶಸ್ತಿಗಳಿಗಿಲ್ಲ!

-ಜಿ.ಪಿ.ಹೆಗಡೆ, ಬೆಂಗಳೂರು

### ರೈತರಿಗೆ ಪರಿಹಾರ

ಕೃಷಿ ಪಂಡಿತನ ಕೊನೆಯ ಮಾತು ಲೇಖನದಲ್ಲಿ (ನಾ. ಕಾರಂತ ಪೆರಾಜೆ) ಹೇಳಿದಂತೆ ಚೇರ್ಕಾಡಿಯವರ ಸ್ವಾವಲಂಬನೆ ಮತ್ತು ಐದು ಅಂಶಗಳ ಸೂತ್ರಗಳನ್ನು ನಮ್ಮ ರೈತರು ಅನುಸರಿಸಿದಲ್ಲಿ ರೈತರ ಸಮಸ್ಯೆಗಳೆಲ್ಲವೂ ತಮ್ಮಷ್ಟಕ್ಕೆ ತಾವೇ ಪರಿಹಾರವಾಗುತ್ತವೆ.

-ಕೆ.ಎಸ್. ರಘುನಾಥರಾವ್ ಫಲ್ಗುಣಿ,/ನರೇಂದ್ರ ಸಿರಕಜೆ, ಮೈಸೂರು/ ಎಚ್.ಎನ್. ವಿಶ್ವನಾಥ್, ಎಸ್.ಪಿ.ದಾಕ್ಷಾಯಣಿ, ಶಿವಮೊಗ್ಗ/ಸೌದಾಮಿನೀ ಪ್ರಭಾಕರ, ಹಾಸನ

### ಮಹಿಳೆಯರ ಅವಮಾನ ಬೇಡ

ಬಹಳಷ್ಟು ಕಾರ್ಟೂನ್‌ಗಳು ಮಹಿಳೆಯರನ್ನು ಅವಮಾನಿಸುವಂತಿರುತ್ತವೆ. ಗಂಡಸರನ್ನು ಅವಮಾನ ಮಾಡುವ ಚಿತ್ರಗಳನ್ನೂ ಹಾಕಿಕೊಳ್ಳಿ. ತಾರತಮ್ಯ ಬೇಡ. ಒಟ್ಟಿನಲ್ಲಿ ಸದಭಿರುಚಿ ಇರಲಿ.

-ವಸುಧಾ ಸುರೇಶ್, ಬೆಂಗಳೂರು

### ಆಕರ್ಷಕ

'ಅರಬ್ಬೀ ಸಮುದ್ರದ ಅಪ್ಸರೆ' ಅತ್ಯಂತ ಆಕರ್ಷಕ ಚಿತ್ರಗಳೊಂದಿಗೆ ಕಣ್ಮನ ತಣಿಸಿತು.

-ನೆ.ಲ.ರಾಂ., ಬೆಂಗಳೂರು

### ಮುದ್ರೆ ವಿವರದಲ್ಲಿ ಸರಿ ಇದೆ

'ಮುದ್ರೆಯಿಂದ ಆರೋಗ್ಯ' ಬರಹದಲ್ಲಿ ಜ್ಞಾನ ಮುದ್ರೆ, ಸೂರ್ಯ ಮುದ್ರೆ, ವರುಣ ಮುದ್ರೆ, ಅಪಾನ ಮುದ್ರೆ ಹಾಗೂ ಅಪಾನವಾಯು ಮುದ್ರೆ ಹೊರತುಪಡಿಸಿ ಉಳಿದ ಆರು ಮುದ್ರೆಗಳಿಗೆ ಚಿತ್ರ ತಾಳೆಯಾಗುವುದಿಲ್ಲ.

- ವಿ. ನಾಗರಾಜ, ಹೊಳೆನರಸೀಪುರ


ಸೂರ್ಯ ಮುದ್ರೆ


ಪ್ರಾಣ ಮುದ್ರೆ


ವಾಯು ಮುದ್ರೆ

ವಿವರದಲ್ಲಿ ಎಲ್ಲವೂ ಸರಿಯಾಗಿದೆ. ಮೂರು ಅಚಿತ್ರಗಳ ಕೆಳಗೆ ಯಾವ ಮುದ್ರೆ ಎಂಬುದು ಕೈಬಿಟ್ಟಿದೆ. ಆದ್ದರಿಂದ ಮತ್ತೊಮ್ಮೆ ಕೊಡಲಾಗಿದೆ.

-ಸಂ.

ಪರೀಕ್ಷೆಯ
ದಿನಗಳು ಇಷ್ಟು ಹತ್ತಿರವಿರುವಾಗ.....
ಕೇವಲ 'ಶಂಖಪುಷ್ಪಿ' ಮಾತ್ರ
ವ್ಯತ್ಯಾಸ ತರಬಲ್ಲದು.

'ಶಂಖಪುಷ್ಪಿ' ಮತ್ತು 'ಬ್ರಾಹ್ಮಿ'ಯು ಅತ್ಯುತ್ತಮ ಬುದ್ಧಿವರ್ಧಕಗಳೆಂದು ಪ್ರಮಾಣಿತಗೊಂಡ ಸಸ್ಯೌಷಧಿಗಳಾಗಿವೆ.




- ಪರೀಕ್ಷೆಯ ದಿನಗಳು ಸಮೀಪಿಸುತ್ತಿದ್ದಂತೆಯೇ ವಿದ್ಯಾರ್ಥಿಗಳಲ್ಲಿ ಕಲಿಕೆಯ ಒತ್ತಡ ಮತ್ತು ಮಾನಸಿಕ ದುಗುಡ ಹೆಚ್ಚುತ್ತದೆ. ಅದೃಷ್ಟವಶಾತ್ 'ಶಂಖಪುಷ್ಪಿ'ಯಿಂದ ಇವೆಲ್ಲವನ್ನೂ ನಿಭಾಯಿಸಬಹುದು.
- ದೀರ್ಘಕಾಲದ ಸಂಶೋಧನೆಯ ನಂತರ ಬ್ರಾಹ್ಮಿಯ ಸಂಯೋಜನೆಯೊಂದಿಗೆ ತಯಾರಿಸಲ್ಪಟ್ಟ ಏಕಮಾತ್ರ ಬುದ್ಧಿವರ್ಧಕ ಸಸ್ಯೌಷಧಿ 'ಶಂಖಪುಷ್ಪಿ'.
- 'ಬ್ರಾಹ್ಮಿ'ಯು ಸೆಂಟ್ರಲ್ ಡ್ರಗ್ ರಿಸರ್ಚ್ ಇನ್‌ಸ್ಟಿಟ್ಯೂಟ್ (CDRI)ನಿಂದ ಅತ್ಯುತ್ತಮ ಜ್ಞಾಪಕ ಶಕ್ತಿವರ್ಧಕ ಸಸ್ಯವೆಂದು ಪ್ರಮಾಣಿತಗೊಂಡಿದೆ.
- ಪರೀಕ್ಷೆಗೆ ಕೇವಲ ಕೆಲವೇ ವಾರಗಳು ಉಳಿದಿರುವಾಗ, ನಿಮ್ಮ ಮಗು ಕೂಡ ಇದರಿಂದ ಪ್ರಯೋಜನ ಹೊಂದಬಹುದು......

ಬೈದ್ಯನಾಥ್
ಶಂಖಪುಷ್ಪಿ
ಉತ್ತಮ ಫಲಿತಾಂಶಕ್ಕಾಗಿ